# ಶ್ರೀ ಗೋದಾದೇವಿ (ಆಂಡಾಳ್)

ಡಾ. ಕೆ.ಎಲ್.ಪ್ರಸನ್ನಾಕ್ಷೀ

ಭರತಖಂಡವು ಆಧ್ಯಾತ್ಮಿಕತೆಯ ತವರು. ಹಲವು ಸಹಸ್ರಮಾನಗಳಿಂದ ಈ ಮಣ್ಣಿನಲ್ಲಿ ಬ್ರಹ್ಮಜ್ಞಾನಿಗಳು ಜನ್ಮತಳೆದು, ಜಗತ್ತನ್ನು ಪುನೀತಗೊಳಿಸಿದ್ದಾರೆ. ಇಲ್ಲಿ ಆಧ್ಯಾತ್ಮಿಕ ಶಿಖರದ ಉತ್ತುಂಗಕ್ಕೆ ಏರಿದ ಮಹಿಳೆಯರಲ್ಲಿ ಎದ್ದುಕಾಣುವ ಹೆಸರು ಗೋದಾದೇವಿಯದು. ಇವಳ ಅಪೂರ್ವ ಜೀವನ ಚಿತ್ರಣವನ್ನು ಇಲ್ಲಿ ನೀಡಿರುವ ಲೇಖಕಿ, ಮೈಸೂರು ಮಹಾರಾಣಿ ಕಾಲೇಜಿನ ನಿವೃತ್ತ ಪ್ರಾಂಶುಪಾಲರು. ಸಂಸ್ಕೃತ ಭಾಷೆ ಹಾಗೂ ಸಾಹಿತ್ಯ, ವೇದಾಂತ ಹಾಗೂ ಇನ್ನಿತರ ಆಧ್ಯಾತ್ಮಿಕ ಕೃತಿಗಳನ್ನು ವಿಶೇಷವಾಗಿ ಅಧ್ಯಯನ ಮಾಡಿರುವ ಅವರು ಮೈಸೂರು ಆಶ್ರಮದ ಭಕ್ತರು. ದೀರ್ಘಕಾಲದಿಂದ ಅವರು 'ವಿವೇಕಪ್ರಭ' ಪತ್ರಿಕೆಯಲ್ಲಿ ಹಲವು ಲೇಖನಗಳನ್ನು ಬರೆಯುತ್ತ ಬಂದಿದ್ದಾರೆ.

### ಪೀಠಿಕೆ

ಸೃಷ್ಟಿಗೊಂಡ ಎಲ್ಲಾ ಜೀವಿಗಳ ಜೀವನದ ಗುರಿ – ಸುಖ, ಆನಂದ. ಈ ಆನಂದವನ್ನು ಪಡೆದುಕೊಳ್ಳುವುದಕ್ಕಾಗಿಯೇ ನಿರಂತರ ಹೋರಾಟ.

ಏನೆಲ್ಲಾ ಎಷ್ಟೆಲ್ಲಾ ಪ್ರಯತ್ನಪಟ್ಟರೂ ಪಡೆದದ್ದೆಲ್ಲ ಅಸಂಪೂರ್ಣ ಅಸಮರ್ಪಕ ಎನ್ನುವ ಅತೃಪ್ತಿ. ಅದಕ್ಕಾಗಿ ವಿಭಿನ್ನ ಮಾರ್ಗಗಳ ತಡಕಾಟ, ಬೆದಕಾಟ. ಸುಖ ಪಡೆಯಬೇಕು, ಆನಂದದಿಂದಿರಬೇಕು, ಅದು ಶಾಶ್ವತವಾದುದಾಗಿರಬೇಕು, ಗಳಿಸಿದ್ದು ನಷ್ಟವಾಗಬಾರದು. ಇಂತಹ ಸುಖದ, ಆನಂದಾನುಭೂತಿಯ ಮಾರ್ಗಾನ್ವೇಷಣೆಯಲ್ಲಿ ಮಾನವ ಕಂಡುಕೊಂಡ ಒಂದು ದಾರಿಯೇ 'ಭಕ್ತಿ'.

### ಆಳ್ವಾರರು

ಭಕ್ತಿ ಎಂದರೆ ಪರಮಾತ್ಮನನ್ನು ಅನನ್ಯವಾಗಿ ಪರಮವಾಗಿ ಪ್ರೀತಿಸುವುದೇ ಆಗಿದೆ. ಇದು ಅಮೃತಸ್ವರೂಪವಾದುದು. ಇದನ್ನು ಪಡೆದವನು ತೃಪ್ತನೂ ಸಂತುಷ್ಟನೂ ಆಗಿರುತ್ತಾನೆ. ಲೋಕದಲ್ಲಿ ಸಾಮಾನ್ಯ ಜನರನ್ನು ಬಾಧಿಸುವ ರಾಗ ದ್ವೇಷ ಅಸೂಯೆ ಮಾತ್ಸರ್ಯಾದಿಗಳು ಅವನನ್ನು ಬಾಧಿಸುವುದಿಲ್ಲ. ಅವನು ನಿರಂತರ ಪರಮಾತ್ಮನ ದಿವ್ಯಸಾನ್ನಿಧ್ಯದ ಅನುಭವದೊಡನೆ ಇರುವುದರಿಂದ ಸತ್ವ ರಜಸ್ಸು ತಮಸ್ಸುಗಳ ಪ್ರಭಾವ ಅವನ ಮೇಲಾಗುವುದಿಲ್ಲ. ಹಾಗಾಗಿ ಅವನು ಸದಾ ಆತ್ಮಾರಾಮನಾಗಿರುತ್ತಾನೆ. ಇಂತಹ ಭಕ್ತಿಯನ್ನು ಪರಮಾನಂದಾನುಭೂತಿಯ ಧಾಮನಾದ ಪರಮಾತ್ಮನನ್ನು ಹೊಂದುವ ಮಾರ್ಗವೆಂದು ಕಂಡುಕೊಂಡ ಒಂದು ಪರಂಪರೆ ದಕ್ಷಿಣದ ದ್ರಾವಿಡ ದೇಶದಲ್ಲಿ ಸುಮಾರು ಕ್ರಿ.ಶ. ೭೨೦ ರ ಸುಮಾರಿಗೆ ಬೆಳೆದು ಬಂದಿತ್ತು. ಅವರನ್ನು 'ಆಳ್ವಾರರು' ಎನ್ನುವರು. ಪರಮೇಶ್ವರನ ಕೃಪೆಯಿಂದ ಪರಿಶುದ್ಧ ಜ್ಞಾನ ಪಡೆದು ಸಂಸಾರದ ಕಗ್ಗಂಟನ್ನು ಕಳಚಿಕೊಂಡು ಸದಾ ಭಗವತ್ಸನ್ನಿಧಾನ ಭಗವದ್ದರ್ಶನ ಭಗವದನುಭವದ ಆನಂದದಲ್ಲಿಯೇ ಮುಳುಗಿರುವವರು 'ಆಳ್ವಾರರು'. '**ನಿತ್ಯಮಚ್ಯುತ ಪದಾಂಬುಜ ಯುಗ್ಮರುಕ್ಮವ್ಯಾಮೋಹತಃ ತದಿತರಾಣಿ ತೃಣಾಯ ಮೇನೇ**'– ಪ್ರಾಪಂಚಿಕರೆಲ್ಲರ ಗುರಿ – ಹಣ ಒಡವೆ ವಸ್ತು ಧನ ಕನಕ ವಾಹನಾದಿಗಳನ್ನು ಗಳಿಸುವುದು; ಅದೇ ತಾವು ಎಂಬ



ಮಹಾ ವ್ಯಾಮೋಹಗಳಲ್ಲಿದ್ದು ಆನಂದಿಸುವುದು. ಆದರೆ ಆಳ್ವಾರರು ಪರಮಾತ್ಮನ ಪಾದಾರವಿಂದ ಎಂಬ ಚಿನ್ನದ ವ್ಯಾಮೋಹಕ್ಕೆ ಈ ಎಲ್ಲವನ್ನೂ ಹುಲ್ಲಿನಂತೆ ಕಡೆಗಣಿಸಿದವರು. ಇವರು ಸಂಸಾರದಲ್ಲಿದ್ದರೂ ಸಂಸಾರಿಗಳಲ್ಲ. ಅವರಿಗೆ ಸರ್ವವಿಧ ಬಂಧು ಪರಮಾತ್ಮ ಒಬ್ಬನೇ. ಅವನ ಸೇವೆಯೇ ಅವರಿಗೆ ಎಲ್ಲವೂ ಆಗಿರುತ್ತದೆ. ಅವನನ್ನು ಹೊರತುಪಡಿಸಿ ಅವರಿಗೆ ಬೇರೆ ಯಾವ

ಆಸೆಯೂ ಇಲ್ಲ. ಆ ಭಗವದ್ರೂಪಾಮೃತವನ್ನು ಸವಿದು ಅದರಲ್ಲೇ ಲೀನರಾಗಿ ಆ ಭೋಗವನ್ನು ಇತರರಿಗೂ ಉಣಬಡಿಸಿದವರು 'ಆಳ್ವಾರರು.' ಜಗತ್ತನ್ನು ಪರಮಾತ್ಮನ ಲೀಲಾಕ್ಷೇತ್ರವಾಗಿ ಭಾವಿಸಿ ಅಲ್ಲಿ ಆನಂದಿಸುವವರು. ಎಂದಾದರೂ ಯಾವುದೋ ಪ್ರಾಕೃತಿಕ ಪ್ರಭಾವಕ್ಕೊಳಗಾಗಿಯೋ, ಬೇರೆ ಯಾವ ಕಾರಣಕ್ಕೋ ತಮ್ಮ ಮನಸ್ಸು ಭಗವಂತನಿಂದ ವಿಚಲಿತವಾಗದಂತೆ ಕಾಪಾಡಬೇಕೆಂದು ಪರಮಾತ್ಮನಲ್ಲಿ ತೀವ್ರವಾಗಿ ಮೊರೆಯಿಡುತ್ತಾರೆ. ವಿಭಿನ್ನ ಭಾವಗಳ ಆಕ್ರಮಣಕ್ಕೊಳಗಾಗಿ ಅವರ ಮನೋಭಾವ ಭಗವದ್ರಸ ವಿಮುಖವಾಗದಂತೆ ತಮ್ಮನ್ನು ರಕ್ಷಿಸಬೇಕೆಂದು ಪರಿಪರಿಯಾಗಿ ಪರಮಾತ್ಮನನ್ನು ಪ್ರಾರ್ಥಿಸುತ್ತಾರೆ.

ಇಂತಹ ಮೊರೆ ಹಾಗೂ ಪರಮಾತ್ಮ ವಿಲಕ್ಷಣವಾದ ದಿವ್ಯ ಲೀಲಾವಿನೋದಾನುಭವಗಳ ಪ್ರಕಾಶಗಳನ್ನೊಳಗೊಂಡಿರುವುದೇ ಈ ಆಳ್ವಾರುಗಳ 'ದಿವ್ಯಪ್ರಬಂಧ'ಗಳು. ಇವುಗಳನ್ನು ಹಾಡುವುದರಿಂದ ಕೇಳುವುದರಿಂದ ಮಾನವನ ಬಾಳು, ಹೊರ ಇಂದ್ರಿಯಗಳ ಅನುಭವದ ಸಂಸ್ಕಾರಗಳ ಪ್ರಭಾವಕ್ಕೆ ಒಳಗಾಗದೆ, ಹಸನಾಗಿರುವುದು, ಹದನಾಗುವುದು, ದಿವ್ಯವೂ ಭವ್ಯವೂ ಆಗುವುದು. ಆಳ್ವಾರರುಗಳ ಸಾಮಾನ್ಯ ಲಕ್ಷಣ — ದೇಹಾಭಿಮಾನ ತ್ಯಜಿಸುವುದು, ದೇಹದ ಸಂಬಂಧ ಹೊಂದಿರುವ ವಸ್ತು, ವ್ಯಕ್ತಿಗಳ ಸಂಬಂಧ ತ್ಯಜಿಸುವುದು, ಸಾಧುಸಂತರ ಸಹವಾಸದಲ್ಲಿರುವುದು, ಸರ್ವಭೂತಗಳಲ್ಲಿ ದಯೆ ಮತ್ತು ಮೈತ್ರಿಯನ್ನು ಹೊಂದಿರುವುದು. ಸಕಲ ಚರಾಚರವಸ್ತುಗಳಲ್ಲಿ ಪರಮಾತ್ಮನು ಅಂತರ್ಗತನಾಗಿರುವನೆಂದು ನಂಬಿ ಅದರೊಡನೆ ವ್ಯವಹರಿಸುವುದು, ದೈವದಿಂದ ದೊರೆತುದರಲ್ಲಿ ತೃಪ್ತನಾಗಿರುವುದು, ಪರಮಾತ್ಮನ ದಿವ್ಯ ಜನ್ಮಕರ್ಮ ಚೇಷ್ಟಿತಗಳನ್ನು ಹೇಳುವುದು, ಕೇಳುವುದು ಧ್ಯಾನಿಸುವುದು, ತಾನು ಮಾಡುವ ಪ್ರತಿ ಚಟುವಟಿಕೆಯನ್ನೂ ಭಗವಂತನದೇ ಆರಾಧನೆ ಎಂದು ಭಾವಿಸುವುದು.

### ವಿಷ್ಣುಚಿತ್ತ (ಪೆರಿಯಾಳ್ವಾರ್)

ಇಂತಹ ಆಳ್ವಾರುಗಳ ಪರಂಪರೆಯಲ್ಲಿ (ವಿಷ್ಣುಚಿತ್ತ) ಪೆರಿಯಾಳ್ವಾರ್ ಒಬ್ಬರು. ಇವರು ವೇದಶಾಸ್ತ್ರ ಪಾರಂಗತರಾದ ಮುಕುಂದಾಚಾರ್ಯರ ಸುಪುತ್ರ. ಇವರ ತಾಯಿ ಶ್ರೀಮತಿ ಪದ್ಮ. ಇವರಿಗೆ ಕುಲಪರಂಪರಾಗತವಾಗಿ ಬಂದಿದ್ದ ವೇದಾಧ್ಯಯನಾದಿಗಳಲ್ಲಿ ಆಸೆ ಇರಲಿಲ್ಲ. ತಮ್ಮ ಜೀವನವನ್ನೇ ಸಂಪೂರ್ಣ ಪರಮಾತ್ಮನ ಕೈಂಕರ್ಯಕ್ಕೆ ವಿನಿಯೋಗಿಸಿಬಿಡಬೇಕೆಂಬ ಹಂಬಲ ಇವರದು. ಅದಕ್ಕಾಗಿ ಶ್ರೀ ವಿಲ್ಲಿಪುತ್ತೂರಿನಲ್ಲಿ (ಇದು ಒಂದು ಸ್ಥಳದ ಹೆಸರು) ಸ್ವಲ್ಪ ಭೂಮಿಯನ್ನು ಪಡೆದುಕೊಂಡು ಅಲ್ಲಿ ಒಂದು ಉದ್ಯಾನವನವನ್ನು ನಿರ್ಮಿಸಿದರು. ಅಲ್ಲಿ ನಾನಾ ವಿಧ ಹೂವಿನ ಗಿಡಗಳನ್ನು , ತುಳಸಿಯ ಗಿಡಗಳನ್ನು ಬೆಳೆಸಿದ್ದರು. ಅವರು ನಿತ್ಯವೂ ಬೆಳಿಗ್ಗೆ ಉಷಃಕಾಲಕ್ಕೇ ಎದ್ದು, ಭಗವಂತನನ್ನೇ ನೆನೆಯುತ್ತಾ ಹಗಲಿನ ಆಹ್ನಿಕಗಳನ್ನು ಮುಗಿಸುತ್ತಿದ್ದರು. ನಂತರ ಉದ್ಯಾನವನಕ್ಕೆ ಹೋಗಿ ಅಲ್ಲಿ ಅರಳಿದ್ದ ಹೂವುಗಳನ್ನೂ ತುಳಸಿಯನ್ನೂ ಬಿಡಿಸಿಕೊಂಡು ಬಂದು, ಸುಂದರವಾದ ಮಾಲೆ ಕಟ್ಟಿ ಅದನ್ನು ಊರಿನ ವಟಪತ್ರಶಾಯಿಯ ದೇವಾಲಯಕ್ಕೆ ತೆಗೆದುಕೊಂಡು ಹೋಗಿ ಅರ್ಪಿಸುತ್ತಿದ್ದರು. ವಟಪತ್ರಶಾಯಿಯಲ್ಲಿ ಇವರಿಗೆ ಅತಿಯಾದ ಭಕ್ತಿ, ಮಾತೃವಾತ್ಸಲ್ಯ. ಇವರ ವಾತ್ಸಲ್ಯ ಯಶೋದೆಗೆ ಶ್ರೀಕೃಷ್ಣನಲ್ಲಿದ್ದ ವಾತ್ಸಲ್ಯಕ್ಕೆ ಸಮಾನವಾದುದಾಗಿತ್ತು.

ಹೀಗೆ ಅವರು ಪ್ರತಿದಿನ ಭಗವಂತನಿಗೆ ಪುಷ್ಪಮಾಲಾ ಕೈಂಕರ್ಯವನ್ನು ಮಾಡುತ್ತಾ ಅತ್ಯಂತ ತೃಪ್ತರೂ ಸಂತುಷ್ಟರೂ ಭಗವದ್ಭಾವಭರಿತರೂ, ಭಗವದಾನಂದಮೃತ ರಸಾರ್ದ್ರರೂ ಆಗಿ ನಿತ್ಯಾನಂದದಲ್ಲಿ ಜೀವನ ಸಾಗಿಸುತ್ತಿದ್ದರು. ಒಂದು ದಿನ ಅವರಿಗೆ ತಮ್ಮ ಉದ್ಯಾನವನದಲ್ಲಿ ದೈವೀಸೌಂದರ್ಯದಿಂದ ಬೆಳಗುತ್ತಿದ್ದ ಒಂದು ಹೆಣ್ಣು ಮಗು ದೊರಕಿತು. ಅವರಿಗೆ ಇದು ಭಗವಂತ ತನ್ನ ಕೈಂಕರ್ಯಕ್ಕೆ ಅನುಗ್ರಹಿಸಿದ ಪ್ರಸಾದವೆಂದೇ ಅನ್ನಿಸಿತು. ಹಾಗಾಗಿ ಆ ಮಗುವನ್ನು, 'ದೇವರೇ ನಿನ್ನ ಅನುಗ್ರಹದಿಂದ ದೊರೆತ ಈ ಮಗುವನ್ನು ನಿನಗೇ ಅರ್ಪಿಸುತ್ತೇನೆ' ಎಂದು ಮನಸ್ಸಿನಲ್ಲೇ ಭಾವಿಸಿಕೊಳ್ಳುತ್ತಾ ಮನೆಗೆ ಎತ್ತಿಕೊಂಡು ಬಂದರು. ಭೂಮಿ ಕೊಟ್ಟ ಮಗುವಾದ್ದರಿಂದ 'ಗೋದಾ' ಎಂದೇ ಮಗುವಿಗೆ ಹೆಸರಿಟ್ಟರು.

### ಗೋದಾದೇವಿಯ ಜೀವನ

ಅವಳು ಚಿಕ್ಕವಯಸ್ಸಿನಲ್ಲೇ ಶಾಸ್ತ್ರ ಗ್ರಂಥಗಳನ್ನು ಅಧ್ಯಯನ ಮಾಡಿದಳು. ತಂದೆ ಮಾಡುವ ಎಲ್ಲಾ ಕೆಲಸದಲ್ಲಿ ಜೊತೆಜೊತೆಯಾಗಿದ್ದು ಸಹಾಯ ಮಾಡುತ್ತಿದ್ದಳು. ತಂದೆಯಂತೆ ಅವಳೂ ವಿಧ ವಿಧವಾದ ಮಾಲೆಗಳನ್ನು ಕಟ್ಟುವುದನ್ನು ಕಲಿತಳು. ತಂದೆಯ ಜೊತೆಯಲ್ಲಿ ಮಾಲೆಯೊಡನೆ ತಾನೂ ದೇವಾಲಯಕ್ಕೆ ಹೋಗುತ್ತಿದ್ದಳು. ಬಹಳ ಶ್ರದ್ಧೆ, ಆಸೆ, ಆಸಕ್ತಿ, ಪ್ರೀತಿಗಳಿಂದ ಭಗವಂತನ ಲೀಲಾಕಥೆಗಳನ್ನು ತಂದೆಯಿಂದ ಕೇಳಿ ತಿಳಿದುಕೊಳ್ಳುತ್ತಿದ್ದಳು. ಹೀಗೇ ಕ್ರಮವಾಗಿ ಅವಳಿಗೆ ಕೃಷ್ಣನಲ್ಲಿ ಪ್ರೀತಿ ದಿನೇ ದಿನೇ ಹೆಚ್ಚಾಗುತ್ತಾ ಹೋಯಿತು. ಅವಳಿಗೆ ಕಂಡದ್ದೆಲ್ಲಾ ಕೃಷ್ಣಮಯವಾಯಿತು. ಪ್ರತಿ ವಸ್ತುವೂ ಕೃಷ್ಣ, ಪ್ರತಿ ಸ್ಥಳವೂ ಕೃಷ್ಣವಾಗಿ ಅವಳಿಗೆ ಭಾಸವಾಗತೊಡಗಿತು. ಮರವನ್ನು ಸುತ್ತಿಕೊಂಡಿದ್ದ ಬಳ್ಳಿಯೊಂದನ್ನು ಕಂಡು ತಾನು ಕೃಷ್ಣನನ್ನು ಹೀಗೆ ಎಂದಿಗೆ ಸೇರುವೆನೋ ಎಂದು ಹಂಬಲಿಸತೊಡಗಿದಳು. ಮನಸ್ಸಿನಲ್ಲೇ ತನ್ನನ್ನು ಕೃಷ್ಣನ ವಧುವನ್ನಾಗಿ ಭಾವಿಸಿಕೊಂಡಳು. ತಾನು ಕಟ್ಟಿದ ಮಾಲೆಯನ್ನು ಧರಿಸಿಕೊಂಡು ಕೃಷ್ಣನು ಮೆಚ್ಚುವ ವಧು ತಾನಾಗುವೆನೋ ಎಂದು ಕನ್ನಡಿಯಲ್ಲಿ ನೋಡಿಕೊಂಡಳು. ನಂತರ ಆ ಮಾಲೆಯನ್ನು ಪರಮಾತ್ಮನ ಸೇವೆಗಾಗಿ ಬುಟ್ಟಿಯಲ್ಲಿಟ್ಟಳು. ಆ ಮಾಲೆಯನ್ನು ಭಗವಂತನಿಗೆ ಅರ್ಪಿಸಿದಾಗ ಆ ಮಾಲೆ ವಿಶಿಷ್ಟವಾದ ಪರಿಮಳದಿಂದಲೂ ಪ್ರಭೆಯಿಂದಲೂ ಕೂಡಿದ್ದುದನ್ನು ಅರ್ಚಕರು ಗಮನಿಸಿದರು. ಆದರೆ ಅವರಿಗೆ ಅದಕ್ಕೆ ಕಾರಣ ಏನೂ ಗೊತ್ತಾಗಲಿಲ್ಲ. ಇದೇ ರೀತಿ ಗೋದೆ ಪ್ರತಿದಿನ ನಡೆದುಕೊಳ್ಳುತ್ತಿದ್ದಳು. ಒಂದು ದಿನ ಇದನ್ನು ಪೆರಿಯಾಳ್ವಾರ್ (ಅವಳ ತಂದೆ) ನೋಡಿಬಿಟ್ಟರು. ಇದೆಂಥಾ ಅಪಚಾರ ಎಂದು ಆ ಪುಷ್ಪಮಾಲೆಯನ್ನು ಅವರು ದೇವರಿಗೆ ಅರ್ಪಿಸಲಿಲ್ಲ, ಬೇರೆಯೇ ಮಾಲೆಯನ್ನು ಕಟ್ಟಿ

ತೆಗೆದುಕೊಂಡು ಹೋಗಿ ಅರ್ಪಿಸಿದರು. ಆದರೆ ಅಂದು ಆ ಮಾಲೆಯಲ್ಲಿ ವಿಶೇಷ ಪರಿಮಳವೂ ಇರಲಿಲ್ಲ , ಕಾಂತಿಯೂ ಇರಲಿಲ್ಲ. ಅಷ್ಟೇ ಅಲ್ಲ ಆ ಮಾಲೆಯಿಂದ ಅಲಂಕರಿಸಿದ ದೇವರ ವಿಗ್ರಹದ ಕಾಂತಿಯೇ ಕುಗ್ಗಿಹೋಗಿತ್ತು. ರಾತ್ರಿ ಪೆರಿಯಾಳ್ವಾರರ ಕನಸಿನಲ್ಲಿ ಪರಮಾತ್ಮನು ಬಂದು, ತಾನು ಗೋದೆ ಮುಡಿದು ಕೊಟ್ಟ ಮಾಲೆಯನ್ನೇ ಇಷ್ಟಪಡುವುದಾಗಿಯೂ, ಮುಂದೆ ಪ್ರತಿ ದಿನವೂ ತನಗೆ ಆ ಮಾಲೆಯನ್ನೇ ಅರ್ಪಿಸಬೇಕೆಂದೂ ಆಜ್ಞಾಪಿಸಿದನು. ಅಂದಿನಿಂದ ಗೋದೆಯನ್ನು 'ಶೂಟ್ಟಿಕ್ಕೊಡುತ್ತ ನಾಚ್ಚಿಯಾರ್' ಎಂದರೆ, 'ತಾನು ಧರಿಸಿದ ಮಾಲೆಯನ್ನು ಪರಮಾತ್ಮನಿಗೆ ಅರ್ಪಿಸಿದ ದೇವಿ' ಎಂದು ಕರೆಯತೊಡಗಿದರು.

ತಂದೆಯಿಂದ ಭಗವಂತನ ಸೌಂದರ್ಯ, ಲಾವಣ್ಯ, ಗಾಂಭೀರ್ಯಾದಿ ಅನಂತ ಕಲ್ಯಾಣಗುಣಗಳನ್ನು ಕೇಳಿ ಕೇಳಿ, ಆಕೆ ಆತನನ್ನೇ ತನ್ನ 'ಪತಿ' ಎಂದು ಮನದಲ್ಲೇ ಸಂಕಲ್ಪಿಸಿಕೊಂಡಳು. ಭಾಗವತದ ಕಥೆ ಆಕೆಯ ಜೀವರಸ. ಹಾಗಾಗಿ ಆಕೆ ತನ್ನನ್ನು ಗೋಪಿಯಂತೆ ಭಾವಿಸಿಕೊಂಡು, ಕೃಷ್ಣ ವಿರಹದ ಬಾಧೆ ತಾಳಲಾರದೆ ತೊಳಲಾಡತೊಡಗಿದಳು. ತಂದೆಯಿಂದ ಗೋಪಿಯರು ಕೃಷ್ಣನಿಂದ ದೀಕ್ಷೆ ಪಡೆದು ಆಚರಿಸಿದ ಕಾತ್ಯಾಯಿನೀ ವ್ರತದೀಕ್ಷೆ ತೆಗೆದುಕೊಂಡಳು. ತಾನೂ ಮೂವತ್ತು ದಿನಗಳ ಕಾಲ, ಮಾರ್ಗಶಿರ ಮಾಸ ಪೂರ್ತಿ, ಈ ವ್ರತವನ್ನು ಶ್ರದ್ಧಾಭಕ್ತಿಗಳಿಂದ ಆಚರಿಸಿ ಪರಮಾತ್ಮನ ಅಂತರಂಗ ಭಕ್ತೆಯಾದಳು.

ತಂದೆಗೆ ಇವಳ ಈ ಹುಚ್ಚಿಗೆ ಪರಿಹಾರ ಕಾಣದಂತಾಯಿತು. ದೇವರನ್ನೇ ವಿವಾಹವಾಗುವೆ ಎನ್ನುವಳಲ್ಲ, ಇದು ಹೇಗೆ ಸಾಧ್ಯ? ಎಂಬ ಚಿಂತೆ ಕೊರೆಯತೊಡಗಿತು. ಸಾಕ್ಷಾತ್ ಭಗವಂತ ಶ್ರೀ ರಂಗನಾಥ ಸ್ವಾಮಿಯೇ ಪಾಂಡ್ಯರಾಜನ ಕನಸಿನಲ್ಲಿ ಬಂದು ಆಕೆಯನ್ನು ವಧುವಿನಂತೆ ಅಲಂಕರಿಸಿ, ಸಕಲ ರಾಜಮರ್ಯಾದೆಯೊಡನೆ ಶ್ರೀರಂಗಕ್ಕೆ ಕರೆತರಬೇಕೆಂದು ಆದೇಶಿಸಿದ. ಹಾಗೆಯೇ ದೇವಾಲಯದ ಅರ್ಚಕರಿಗೂ ಅವನು ಕನಸಿನಲ್ಲಿ ಕಾಣಿಸಿಕೊಂಡು, ಅವರು ಗೋದಾದೇವಿಯನ್ನು ಸ್ವಾಗತಿಸಬೇಕಾದ ರೀತಿಯನ್ನು ತಿಳಿಸಿಕೊಟ್ಟನು. ಹೀಗೆ ಸಕಲ ಮರ್ಯಾದೆಯೊಡನೆ ಬಂದ ಆಕೆಯನ್ನು ಪರಮಾತ್ಮನು ತನ್ನೊಳಗೆ ಲಯ ಮಾಡಿಕೊಂಡು ಬಿಟ್ಟ.

ಆದರೆ ಪೆರಿಯಾಳ್ವಾರರಿಗೆ ತಾನು ನಡೆಸಿಕೊಡಬೇಕೆಂದಿದ್ದ ತನ್ನ ಮಗಳ ವಿವಾಹಭಾಗ್ಯ ತಪ್ಪಿ ಹೋದುದಕ್ಕೆ ಬಹಳ ದುಃಖವಾಯಿತು. ಅವರು ತನ್ನ ಆರಾಧ್ಯ ದೈವ ವಟಪತ್ರಶಾಯಿಯಲ್ಲಿ ಕಣ್ಣೀರು ಸುರಿಸುತ್ತಾ ಮೊರೆಯಿಟ್ಟರು. ಪರಮಾತ್ಮ ಅವರ ಮೊರೆ ಕೇಳಿ ಗರುಡಾರೂಢನಾಗಿ ಗೋದೆಯೊಡನೆ ಬಂದು ಪೆರಿಯಾಳ್ವಾರರಿಗೆ ದಿವ್ಯದೃಷ್ಟಿ ನೀಡಿ, ಅವರು ತಮ್ಮ ಮಗಳ ವಿವಾಹ ವೈಭವವನ್ನು ನೋಡುವಂತೆ ಅನುಗ್ರಹಿಸಿದನು. ಹೀಗೆ ಗೋದಾದೇವಿ ತನ್ನ ನಿರತಿಶಯವಾದ ಪ್ರೀತಿಯಿಂದ ಪರಮಪುರುಷನನ್ನೇ ಆಳಿದಳೆಂಬ ಕಾರಣ ಅವಳಿಗೆ 'ಆಂಡಾಳ್' ಎಂದು ಕರೆಯಲಾಯಿತು. ಮಹಿಮಾತಿಶಯವಾದ ಭಕ್ತವೃಂದವನ್ನು ಆಳಿದವಳು ಅವಳು.

### ಗೋದಾದೇವಿಯ ಕೃತಿಗಳು

ಈಕೆ ರಚಿಸಿದ ಪ್ರಬಂಧಗಳು **'ತಿರುಪ್ಪಾವೈ'** ಮತ್ತು **'ನಾಚ್ಚಿಯಾರ್ ತಿರುಮೊಳಿ'.**

### ತಿರುಪ್ಪಾವೈ

ತಿರುಪ್ಪಾವೈ ಮೂವತ್ತು ಪದ್ಯಗಳನ್ನೊಳಗೊಂಡಿದೆ. ಅದು ಪರಮಾತ್ಮನ ದಿವ್ಯ ಸಾನ್ನಿಧ್ಯ ಪಡೆಯುವ ಅನುಕೂಲ ಪರಿಸ್ಥಿತಿಯನ್ನು ತಿಳಿಸುತ್ತದೆ. ನಿರ್ಮಲವಾದ ಶುದ್ಧ ಅಂತಃಕರಣದಿಂದ ಪರಮಾತ್ಮನನ್ನೇ ಪರಮ ಎಂದು ಭಾವಿಸಿದವರಿಗೆ ಪರಮಾತ್ಮನ ದಿವ್ಯಸಾನ್ನಿಧ್ಯ ಸಿಕ್ಕೇ ಸಿಗುವುದೆಂದು ಈ ಕೃತಿ ಘೋಷಿಸುತ್ತದೆ. ಶರಣಾಗತಿಯ ಅಗತ್ಯವನ್ನೂ ಅದರ ಕ್ರಮವನ್ನೂ ತಿಳಿಸುತ್ತದೆ. ಪರಮಾತ್ಮನಿಗಾಗಿ ಹಂಬಲಿಸುತ್ತಾ ಅವನನ್ನರಸುವ ವಿವಿಧ ಬಗೆಯ ಜನರನ್ನೂ ವಿವಿಧ ಮಾರ್ಗಗಳನ್ನೂ ವಿವರಿಸುತ್ತದೆ. ಗೋದಾದೇವಿಯು ತಾನು ಪಡೆದ ಈ ದಿವ್ಯಾಮೃತವನ್ನು ಭಕ್ತರೂ ಹೊಂದಲಿ ಎಂಬ ಬಯಕೆಯಿಂದ ಇದನ್ನು ರಚಿಸಿದ್ದಾಳೆ.

ಈ ಕೃತಿ ಭಾಗವತ ಧರ್ಮದ ಕೈಪಿಡಿ ಎಂದರೆ ತಪ್ಪಾಗುವುದಿಲ್ಲ. ಇದು ರಸ-ಧ್ವನಿ, ರೀತಿ, ಗುಣಾಲಂಕಾರ ಮುಂತಾದ ಕಾವ್ಯಧರ್ಮಗಳಿಂದ ಕೂಡಿದ್ದು, ಭಗವದ್ಗೀತೆಯಂತೆ ಉತ್ತಮ ಶಾಸ್ತ್ರಗ್ರಂಥ ಎಂಬ ಕೀರ್ತಿಗೆ ಭಾಜನವಾಗಿದೆ. ಇಂತಹ ಅಮೂಲ್ಯ ಕೃತಿಯನ್ನು ಪ್ರತಿದಿನವೂ ದೇವರ ಆರಾಧನಾ ಸಮಯದಲ್ಲಿ ಪಾರಾಯಣ ಮಾಡುವ ಪದ್ಧತಿ ಇದೆ. ವಿಶೇಷವಾಗಿ ಮಾರ್ಗಶಿರ ಮಾಸದಲ್ಲಿ ಈ ಕೃತಿಯ ಅರ್ಥಾನುಸಂಧಾನದೊಡನೆ ಕಾಲಕ್ಷೇಪ ಮಾಡುವ ಪದ್ಧತಿ ಇಂದಿಗೂ ಇದೆ.

ಗೋಕುಲದ ಗೋಪಿಯರು ಕೃಷ್ಣನನ್ನು ಪತಿಯನ್ನಾಗಿ ಹೊಂದಲು ಮಾಡಿದ 'ಕಾತ್ಯಾಯನೀ ವ್ರತ'ವನ್ನು ಆಧಾರವಾಗಿಟ್ಟುಕೊಂಡು ಈ ಕೃತಿ ರಚಿತವಾಗಿದೆ. ಆಂಡಾಳ್ (ಗೋದಾ) ತನ್ನನ್ನು ಗೋಪಿ ಎಂದೇ ಭಾವಿಸಿಕೊಂಡು, ಬೆಳಗಿನ ಜಾವ ಪುಣ್ಯ ನದಿಯ ಸ್ನಾನಕ್ಕೆ ಹೋಗುತ್ತಿರುವಂತೆ ಕಲ್ಪಿಸಿಕೊಂಡಿದ್ದಾಳೆ. ಹಾಗೆ ತಾನು ಸ್ನಾನ ಪೂಜೆಗಳಿಗಾಗಿ ಹೋಗುವಾಗ ತನ್ನ ಒಬ್ಬೊಬ್ಬ ಗೆಳತಿಯನ್ನೂ, ಈ ದಿವ್ಯ ಮಂಗಳ ವ್ರತದಲ್ಲಿ ಭಾಗಿಯಾಗಿರೆಂದು ಎಬ್ಬಿಸುತ್ತಾಳೆ. ಪರಿವಾರದೊಡಗೂಡಿದ ತನ್ನ ಹೃದಯ ನಿವಾಸಿ ಪ್ರಾಣಪ್ರಿಯ ಪರಮಾತ್ಮನಿಗೂ ಸುಪ್ರಭಾತ ಹಾಡುತ್ತಾಳೆ. ಮೊದಲು ಐದು ಪಾಶುರ(ಪದ್ಯ)ಗಳಲ್ಲಿ ಭಗವಂತನ ಅನುಭವಕ್ಕೆ ಅಗತ್ಯವಾದ ಉಪಕರಣಗಳನ್ನು ತಿಳಿಸುತ್ತಾಳೆ. ತನ್ನ ಭಗವದನುಭವಕ್ಕೆ ಅನುಕೂಲಳಾಗುವಂತಹ - ಭಗವದನುಭವ ರಸ ತಿಳಿದ ಒಬ್ಬಳನ್ನು, ಭಗವದ್ವಿಷಯವನ್ನೇ ಆಸ್ವಾದಿಸುತ್ತಾ ನಿದ್ರಾಮಗ್ನಳಾಗಿರುವ ಒಬ್ಬಳನ್ನು, ಶ್ರೀಕೃಷ್ಣನ ಪ್ರಿಯತಮೆ ತಾನೆಂಬ ಭಾವದಲ್ಲಿ ಮೈಮರೆತ ಮತ್ತೊಬ್ಬಳನ್ನು, ಕೃಷ್ಣನೇ ಬಂದು ತನ್ನನ್ನು ನಿದ್ದೆಯಿಂದೆಬ್ಬಿಸಿ ತನ್ನೊಡನೆ ಕರೆದೊಯ್ಯಲಿ

ಎಂಬ ನಿರೀಕ್ಷೆಯಲ್ಲಿ ಇನ್ನೂ ಹಾಸಿಗೆಯಲ್ಲೇ ಇರುವವಳನ್ನು, ಕೃಷ್ಣನಿಗೆ ವಿರಹಸಂತಾಪ ಉಂಟುಮಾಡಿರುವೆನೆಂಬ ಭಾವದಲ್ಲಿರುವವಳನ್ನು — ಹೀಗೆ ವಿವಿಧ ಭಾವಗಳಲ್ಲಿ ಕೃಷ್ಣಮಯರಾಗಿರುವವರನ್ನು ಮುಂದಿನ ಹತ್ತು ಪದ್ಯಗಳಲ್ಲಿ ಎಬ್ಬಿಸಲು ಪ್ರಯತ್ನಿಸುತ್ತಾಳೆ. ಶ್ರೀಕೃಷ್ಣನನ್ನು ತಾವು ಬಂದ ಕಾರ್ಯವೇನೆಂದು ವಿಚಾರಿಸಬೇಕೆಂದು ಪ್ರಾರ್ಥಿಸುತ್ತಾಳೆ. ಕೊನೆಯಲ್ಲಿ 'ಎತ್ತೈಕ್ಕುಂ ಏಳೇಳು ಪಿರವಿಕ್ಕುಂ ಉನ್ ತನ್ನೋಡು ಉತ್ತೋಮೇ ಯಾವೋಂ ಉನಕ್ಕೇ ನಾಮ್ ಆಳ್ ಶೈಯ್ವೋಮ್ – ಇತ್ತೈಪ್ಪರೈ ಕೊಳ್ವಾನ್ ಅನ್ರ್, ಕಾಣ್ ಗೋವಿಂದ' – 'ಎಂದೆಂದಿಗೂ ಏಳೇಳು ಜನ್ಮಕ್ಕೂ ನಿನ್ನ ಕೈಂಕರ್ಯ ಭಾವ, ದಾಸ್ಯ ಸುಖ ನಮ್ಮದಾಗಿರಲಿ, ಇದೇ ನಮ್ಮ ಆಸೆ, ಪ್ರಾರ್ಥನೆ. ನಮಗೆ ಬೇರೆ ಯಾವ ಪ್ರಾರ್ಥನೆಯೂ ಇಲ್ಲ, ಆಸೆಯೂ ಇಲ್ಲ' ಎಂದು ಪ್ರಾರ್ಥಿಸುತ್ತಾ ತಾಯಿ ಗೋದೆ ತನ್ನನ್ನೇ ತಾನು ಪರಮಾತ್ಮನಲ್ಲಿ ಅರ್ಪಣೆ ಮಾಡಿಕೊಳ್ಳುತ್ತಾಳೆ.

'ತಿರು' ಎಂದರೆ ಮೋಕ್ಷ (ಶ್ರೇಷ್ಠಫಲ). ಅದನ್ನು ಕರುಣಿಸುವ 'ಪಾವೈ' – ವ್ರತವನ್ನು ಇದು ತಿಳಿಸುತ್ತದೆ ಆದ್ದರಿಂದ 'ತಿರುಪ್ಪಾವೈ' (ಮಾಯಾವಶನಾಗಿ ಪಾಪ–ಪುಣ್ಯದ ಧರ್ಮಕರ್ಮವಶನಾದ) ಪರತಂತ್ರನಾದ ಜೀವನನ್ನು ಪರಮಾತ್ಮನು ಸ್ವೀಕರಿಸುವಂತೆ ಮಾಡುವಂತಹ ಪ್ರಾರ್ಥನಾ ಪದ್ಯಗಳಿವು. ಆದುದರಿಂದ ಇದನ್ನು ನಿತ್ಯ ಹಾಡುವವರ – 'ಪಾತಕಂಗಳ್ ತೀರ್ಕುಂ' –ಪಾಪಗಳನ್ನೆಲ್ಲಾ ಸಂಪೂರ್ಣ ನಾಶಮಾಡಿ – 'ಪರಮನಡಿಕಾಟ್ಟುಂ'– ಪರಮಾತ್ಮನ ದರ್ಶನವನ್ನು ಇದು ಮಾಡಿಸುತ್ತದೆ.

### ನಾಚ್ಚಿಯಾರ್ ತಿರುಮೊಳಿ

ಹತ್ತು ಹತ್ತು ಪದ್ಯಗಳ ಹದಿನಾಲ್ಕು ದಶಕಗಳುಳ್ಳ ಕೃತಿ ಇದು. ಪರಮಾತ್ಮನಲ್ಲಿ ದಿವ್ಯಪ್ರೇಮವನ್ನು ವೃದ್ಧಿಪಡಿಸುವಂತೆ ಕಾಮದೇವನನ್ನು ಪ್ರಾರ್ಥಿಸುವ ಸ್ತೋತ್ರವಿದು. ಜೀವ ತಾನು ಪರಮಾತ್ಮನನ್ನು ಪ್ರೀತಿಸಿದಂತೆ, ಪರಮಾತ್ಮನೂ ತನ್ನನ್ನು ಪ್ರೀತಿಸುವಂತೆ ಮಾಡಲು ಹೊಂದಿರಬೇಕಾದ ಮನೋಭಾವವನ್ನು ಇದು ಚಿತ್ರಿಸುತ್ತದೆ. ಪರಮಾತ್ಮನನ್ನು ಪಡೆಯುವ ಹಂಬಲದಿಂದ ಹಗಲು ಊಟ ಮೊದಲಾದ ಉಪಚಾರವಿಲ್ಲ, ರಾತ್ರಿ ನಿದ್ರೆಯಿಲ್ಲ. ಪರಮಾತ್ಮನ ಅಮಲಿನಲ್ಲಿ ಜೀವ ಸಮಾಧಾನವಿಲ್ಲದೆ ತಲ್ಲಣಗೊಂಡಿರುವಾಗ ಕೃಷ್ಣ ತನ್ನನ್ನು ವಿವಾಹವಾಗಲಿಕ್ಕಾಗಿ ಸಾವಿರಾರು ಆನೆಗಳೊಡನೆ ದಿಬ್ಬಣ ಬಂದ ಕನಸನ್ನು ಆಕೆ ಕಾಣುತ್ತಾಳೆ. ಕನಸಿನಲ್ಲಿ ಆಕೆ ವಿವಾಹ ಮಂಗಳೋತ್ಸವದ ಪ್ರತಿಯೊಂದು ಧಾರ್ಮಿಕ ವಿಧಾನಗಳನ್ನೂ ಅನುಭವಿಸುತ್ತಾಳೆ. ಇದು ಈ ಕೃತಿಯ ಆರನೆಯ ದಶಕದಲ್ಲಿ ಚಿತ್ರಿತವಾಗಿದೆ.

ಇದು ಒಂದು ಭಾವಾವೇಶ ಹುಟ್ಟಿಸುವ ಸೊಗಸಾದ ಭಾವಗೀತೆ. ಸಂಪೂರ್ಣ ಧಾರ್ಮಿಕ ಭಾವವನ್ನುಂಟು ಮಾಡುವ ಈ ಕೃತಿಯ ಕೊನೆಯಲ್ಲಿ ತಾನು ಪರಮಾತ್ಮನೊಡನೆ ಸದಾ ಇರುವ ಅನುಭವವನ್ನು ಅತ್ಯಂತ ಹೃದಯಂಗಮವಾಗಿ ಚಿತ್ರಿಸಿದ್ದಾಳೆ. ಪ್ರತಿಯೊಬ್ಬ ಚೇತನನೂ ಪರಮಾತ್ಮನನ್ನು ಸೇರಬೇಕೆಂಬ ಭಾವವನ್ನು ಹೊಂದಬೇಕೆಂದೂ, ಮೋಕ್ಷೈಶ್ವರ್ಯ ಸಾಮ್ರಾಜ್ಯದ ಅನುಭವಿಯಾಗಬೇಕೆಂದೂ ಸೂಚಿಸಿದ್ದಾಳೆ.

### ಆಳ್ವಾರರಲ್ಲಿ ಗೋದಾದೇವಿಯ ಹಿರಿಮೆ

ಹೀಗೆ ಗೋದಾದೇವಿಯು 'ಮೋಕ್ಷಸಾಧನಸಾಮಗ್ರ್ಯಾಂ ಭಕ್ತಿರೇವ ಗರೀಯಸೀ', 'ಮೋಕ್ಷೋಪಾಯಸ್ಯ ಕಿಂ ರೂಪಂ? ಭಕ್ತಿರಿತ್ಯಕ್ಷರ ದ್ವಯಂ', ಮುಂತಾದ ಮೋಕ್ಷಕ್ಕೆ ಸಾಧನವಾಗಿ ಭಕ್ತಿಯ ಪ್ರಾಧಾನ್ಯವನ್ನು ಸಾರಿದ ಆಚಾರ್ಯರ ಉಪದೇಶವನ್ನು, ತನ್ನ ಜೀವನದಲ್ಲಿ ಅನುಷ್ಠಾನ ಮಾಡಿ ತೋರಿಸಿದಳು. ಮೋಕ್ಷ ಪ್ರತಿಯೊಂದು ಜೀವಿಯ ಜನ್ಮಸಿದ್ಧಹಕ್ಕು. ಅದನ್ನು ಪಡೆಯಲು ಭಗವಂತನಲ್ಲಿ ಪ್ರೀತಿಯನ್ನು ಗಳಿಸಿಕೊಳ್ಳಲು ಪ್ರತಿಯೊಬ್ಬನೂ ಪ್ರಯತ್ನಿಸಬೇಕೆಂದು ಸಾರಿದಳು. ಇವಳ ಈ ರೀತಿಯ ಆಚರಣೆಯಿಂದ ಪರಮಾತ್ಮನನ್ನು ಒಲಿಸಿಕೊಳ್ಳಲು ಸತೀಭಕ್ತಿಯೇ ಸುಲಭಸಾಧನವೆಂದರಿತ ಆಳ್ವಾರುಗಳು ಲೋಕದಲ್ಲಿನ ವ್ಯವಹಾರಕ್ಕನುಗುಣವಾಗಿ ಪುರುಷರಾಗಿ ಜನ್ಮ ತಳೆದಿದ್ದರೂ, ನಾಯಿಕಾಭಾವದಿಂದ (ಪರಕಾಲನಾಯಿಕಾ–ನಮ್ಮಾಳ್ವಾರ್, ಪರಾಂಕುಶನಾಯಿಕಾ–ತಿರುಮಂಗೈ ಆಳ್ವಾರ್ ಇತ್ಯಾದಿ) ಪರಮಾತ್ಮನನ್ನು ಸಾಧಿಸಿಕೊಂಡಿದ್ದಾರೆ. ಹಾಗಾಗಿ ಆಳ್ವಾರರುಗಳ ಸಾಲಿನಲ್ಲಿ ಈಕೆಯ ಸ್ಥಾನ ಮಹೋನ್ನತವಾದುದು. ಸತೀಭಾವದಿಂದ ಭಗವಂತನನ್ನು ಪಡೆದುಕೊಳ್ಳುವ ಗೋದಾದೇವಿಯ ಈ ಸಾಧನಾ ಮಾರ್ಗ ಮುಂದಿನ ಸಾಧಕರ ಮೇಲೆ ವಿಶೇಷ ಪ್ರಭಾವ ಬೀರಿತು. ಅದರಲ್ಲಿ ಮುಂದೆ ಕ್ರಿ.ಶ. ಹನ್ನೆರಡು, ಹದಿನೈದು ಶತಮಾನಗಳಲ್ಲಿದ್ದ ಅಕ್ಕ ಮಹಾದೇವಿ, ಮೀರಾಬಾಯಿ ಮೊದಲಾದವರ ಜೀವನಾನುಭವ ಗೋದೆಯ ಜೀವನಕ್ಕೆ ಸಂವಾದಿಯಾಗಿರುವುದು ಅವರ ಚರಿತೆಯನ್ನು ಓದಿದವರ ಗಮನಕ್ಕೆ ಬಾರದಿರದು. ಇಂದು ವಿಶ್ವವನ್ನೆಲ್ಲಾ ಹಬ್ಬಿನಿಂತಿರುವ ಚೈತನ್ಯಮಹಾಪ್ರಭುಗಳ ಪಂಥವೂ ಈ ಸಿದ್ಧಾಂತದ್ದೇ ಪ್ರತಿರೂಪವಾಗಿದೆ ಎನ್ನುವುದು ನಿರ್ವಿವಾದ.

### ಉಪಸಂಹಾರ

ಈ ರೀತಿ ಜೀವಿಯು ತನ್ನ ಮೂಲನೆಲೆಯನ್ನು, ಪರಮಸುಖ, ಶಾಂತಿ, ಆನಂದ ಧಾಮವನ್ನು ಸೇರಲು ಸಾಧನೆ ಮಾಡುತ್ತಾ ಹೊರಟ ಮಾರ್ಗಗಳಲ್ಲಿ ಭಕ್ತಿಮಾರ್ಗವು ಸುಲಭತರ ಎನ್ನಿಸಿಕೊಂಡಿತು. ಅದರಲ್ಲಿ ಸಾಧಾರಣ ಮಾನವನಿಗೆ ಅತ್ಯಂತ ಸಹಜ ಸರಳ ಭಾವವೇ 'ಸತೀ ಭಾವ'. ಈ ಭಾವದಿಂದ ಭಗವಂತನನ್ನು ತನ್ನವನನ್ನಾಗಿಸಿಕೊಳ್ಳುವ ಸಾಧನೆ ಮಾಡುತ್ತಾ ಇಹದಲ್ಲೂ ಭಗವಂತನ ದಿವ್ಯ ಸಾನ್ನಿಧ್ಯದ ಸುಖಾನುಭವವನ್ನು ಹೊಂದಿ, ಕೊನೆಯಲ್ಲಿ ಅವನಲ್ಲೇ ಲೀನಳಾದ ಗೋದಾದೇವಿ ಅಥವಾ ಆಂಡಾಳ್ ಭಕ್ತರ – ಸಾಧಕರ ಶ್ರೇಷ್ಠ ಮಾರ್ಗದರ್ಶಕಿಯಾಗಿ, ಅವರ ಹೃದಯಗಳಲ್ಲಿ ಚಿರಸ್ಥಾಯಿಯಾಗಿ ವಿರಾಜಿಸುತ್ತಿರುವಳು. ✡